9. ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ರಸ್ತೆ ಸುರಕ್ಷತಾ ಸಮಿತಿಯನ್ನು ಸರ್ಕಾರ ರಚಿಸಿದೆ. ಈ ಸಮಿತಿಯು ರಸ್ತೆ ಸಂಚಾರದ ಸಮಸ್ಯೆಗಳನ್ನು ಪರಿಶೀಲಿಸಿ ಅವುಗಳನ್ನು ಪರಿಹರಿಸುವ ದಿಶೆಯಲ್ಲಿ ಚಟುವಟಿಕೆಗಳನ್ನು ನಡೆಸುತ್ತದೆ.

ಸರ್ಕಸ್ ಕಂಪನಿಗಳಿಗೆ ತೆರಿಗೆ ವಿನಾಯಿತಿ

1035 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಲವು ರಾಜ್ಯ ಸರ್ಕಾರಗಳು ಸರ್ಕಸ್ ಕಂಪನಿಗಳಿಗೆ ಶೇ.100 ರಷ್ಟು ಮನರಂಜನಾ ತೆರಿಗೆ ವಿನಾಯಿತಿ ನೀಡುತ್ತಿರುವುದು ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ರಾಜ್ಯಕ್ಕೆ ಬರುವ ಸರ್ಕಸ್ ಕಂಪನಿಗಳಿಗೆ ಮನರಂಜನೆ ತೆರಿಗೆಯಿಂದ ವಿನಾಯಿತಿ ನೀಡುವ ಪ್ರಸ್ತಾವನೆ ಇದೆಯೆ

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು):

ಅ) ಇಲ್ಲ

ಆ) ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ (1958) ಅಡಿಯಲ್ಲಿ ಸರ್ಕಸ್ ಕಂಪನಿಗಳ ಮೇಲೆ ತೆರಿಗೆಯನ್ನು ವಿಧಿಸಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಜಯನಗರದಲ್ಲಿ ವಾಹನ ನಿಲುಗಡೆಯಿಂದ ಆಗುತ್ತಿರುವ ತೊಂದರೆ

896 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ಜನತಾ ಬಜಾರಿನ ಪಕ್ಕದಲ್ಲಿರುವರ ರಸ್ತೆಯಲ್ಲಿ ವಾಹನಗಳನ್ನು ಮನಬಂದ ರೀತಿಯಲ್ಲಿ ವಾಹನಗಳನ್ನು ಮನಬಂದ ರೀತಿಯಲ್ಲಿ ನಿಲುಗಡೆ ಮಾಡುತ್ತಿರುವುದರಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಜಯನಗರ ವಾಣಿಜ್ಯ ಸಂಕೀರ್ಣದ ಸುತ್ತಮುತ್ತಲೂ ವಾಹನಗಳನ್ನು ನಿಲುಗಡೆ ಮಾಡುವ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿ ಕೊಳ್ಳುವುದಕ್ಕೆ ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಹೌದು

ಆ) ವಾಣಿಜ್ಯ ಸಂಕೀರ್ಣದ ಸುತ್ತಲೂ ವಾಹನಗಳನ್ನು ನಿಲ್ಲಿಸಲು ವಾಹನ ನಿಲುಗಡೆ ಜಾಗಗಳನ್ನು ಗುರುತಿಸಿ ಬಣ್ಣ ಬಳಿದು ಗುರುತು ಮಾಡುಲಾಗಿದ್ದು ಪಾದಚಾರಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಮುಂದೆಯೂ ಸಹಾ ವಾಹನ ನಿಲುಗಡೆ ಜಾಗವನ್ನು ಗುರ್ತಿಸಿ ಇನ್ನು ಹೆಚ್ಚಿನ ವಾಹನಗಳನ್ನು ನಿಲ್ಲಿಸಲು ಅನುವು ಮಾಡಿಕೊಡಲಾಗುವುದು.

ದಹಲಿಯಲ್ಲಿ ಕರ್ನಾಟಕ ಪ್ರವಾಸಿಗರಿಗೆ ಪ್ರತ್ಯೇಕ ಅತಿಥಿ ಗೃಹ ನಿರ್ಮಾಣ

893 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೆಹಲಿಯಲ್ಲಿನ ಕರ್ನಾಟಕ ಭವನದಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಈ ಕರ್ನಾಟಕ ಭವನದಲ್ಲಿ ಕರ್ನಾಟಕದಿಂದ ಬರತಕ್ಕ ಪ್ರವಾಸಿಗಳಿಗೆ ಹಾಗೂ ಸಂದರ್ಶಕರಿಗೆ ಉಳಿದುಕೊಳ್ಳಲು ಅವಕಾಶವಿದೆಯೇ?

ಇ) *1994ನೇ ಜನವರಿಯಿಂದ ಡಿಸೆಂಬರ್‌ಗೆ ಎಷ್ಟು ಜನ ಕರ್ನಾಟಕದ ಪ್ರವಾಸಿಗಳಿಗೆ ಹಾಗೂ ಸಂದರ್ಶಕರಿಗೆ ಈ ಭವನದಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿ ಕೊಡಲಾಗಿದೆಯೆ?*

ಈ) *ಹೊಸದಾಗಿ ದೆಹಲಿಯಲ್ಲಿ ಮತ್ತೊಂದು ಅತಿಥಿ ಗೃಹವನ್ನು ಸರ್ಕಾರ ಖರೀದಿಸುವುದು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಯೇ?*

ಉ) *ಹಾಗಿದ್ದಲ್ಲಿ ಹೊಸದಾಗಿ ಖರೀದಿಸುವ ಕರ್ನಾಟಕ ಭವನವನ್ನು ಕರ್ನಾಟಕದಿಂದ ಬರತಕ್ಕ ಪ್ರವಾಸಿಗಳಿಗೆ ಹಾಗೂ ಸಂದರ್ಶಕರಿಗೆ ಉಪಯೋಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಎಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಮಾನ್ಯ ರಾಜ್ಯ ಪಾಲರು ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಯ್ದಿರಿಸಿದ ಕೊಠಡಿಗಳನ್ನು ಹೊರತುಪಡಿಸಿ ಕರ್ನಾಟಕ ಭವನ-1ರಲ್ಲಿ 18 ಕೊಠಡಿಗಳು ಹಾಗೂ ಕರ್ನಾಟಕ ಭವನ 11ರಲ್ಲಿ ಕೊಠಡಿಗಳಿರುತ್ತವೆ.

ಆ) ಕರ್ನಾಟಕದಿಂದ ಬರುವ ಪ್ರವಾಸಿಗಳಿಗೆ ಹಾಗೂ ಸಂದರ್ಶಕರಿಗೆ ಈ ಭವನದಲ್ಲಿ ಉಳಿದುಕೊಳ್ಳಲು ಲಭ್ಯತೆಗೆ ಒಳಪಟ್ಟು ನೀಡಲಾಗುತ್ತದೆ.

ಇ) ಒಟ್ಟು 1080 ಜನ ಪ್ರವಾಸಿಗರು ಹಾಗೂ ಸಂದರ್ಶಕರಿಗೆ ಕೊಡಲಾಗಿತ್ತು.

ಈ) ಹುಡ್ಕೋ ಪ್ರಾಧಿಕಾರವು ನಿರ್ಮಿಸಿರುವ ಸಮುದಾಯ ಕೇಂದ್ರದಲ್ಲಿ 37 ಕೊಠಡಿಗಳುಳ್ಳ ಒಂದು ಬ್ಲಾಕ್ ಅತಿಥಿ ಗೃಹವನ್ನು ಖರೀದಿಸಲು ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಉ) ಈಗಾಗಲೇ ಜಾರಿಯಲ್ಲಿರುವಂತೆ ಲಭ್ಯತೆಗೆ ಒಳಪಟ್ಟು ಕರ್ನಾಟಕದಿಂದ ದೆಹಲಿಗೆ ಹೋಗತಕ್ಕ ಪ್ರವಾಸಿಗಳಿಗೆ ಹಾಗೂ ಸಂದರ್ಶಕರಿಗೆ ಹೊಸದಾಗಿ ಖರೀದಿಸಿರುವ ಕರ್ನಾಟಕ ಭವನದಲ್ಲೂ ಸ್ಥಳಾವಕಾಶ ಕಲ್ಪಿಸಿಕೊಡುಲಾಗುವುದು.

ಖಾಲಿ ಇರುವ ಬ್ಯಾಕ್‌ಲಾಗ್‌ಹುದ್ದೆಗಳ ಭರ್ತಿ

795 : ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ (ಯಲಹಂಕ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಬ್ಯಾಕ್‌ಲಾಗ್‌ಹುದ್ದೆಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಸರ್ಕಾರ ಆದೇಶ ಸಂಖ್ಯೆ ಮತ್ತು ಹೊರಪಡಿಸಿದ ದಿನಾಂಕ ಯಾವುದು?*

ಆ) *ಈ ರೀತಿ ಆದೇಶ ಹೊರಡಿಸಿದಿ ತಾರೀಖಿನಿಂದ ಇಂದಿನ ವರೆಗೆ ರಾಜ್ಯದ ವಿವಿಧ ಇಲಾಖೆಗಳಲ್ಲಿ ಸೃಷ್ಟಿಯಾಗಿದ್ದ ವಿವಿಧ ರೀತಿಯ ಹುದ್ದೆಗಳು ಯಾವುವು (ಪೂರ್ಣ ವಿವರ ಒದಗಿಸುವುದು)*

ಇ) *ಇಂಥ ಹುದ್ದೆಗಳನ್ನು ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಭರ್ತಿ ಮಾಡಿದ್ದಾರೆ, ಈ ರೀತಿ ಭರ್ತಿ ಮಾಡಲು ಅನುಸರಿಸಿದ ಮಾರ್ಗಗಳಾವುವು.*

ಈ) *ಭರ್ತಿ ಮಾಡದೇ ಹಾಲಿ ಇರುವ ಹುದ್ದೆಗಳನ್ನು ವಿಶೇಷ ನೇಮಕಾತಿ ಜಾರಿಗೊಳಿಸಲಾಗುವುದೇ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):

ಅ) ಈ ಉದ್ದೇಶಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ ಸಿಆನುಇ 19 ಸೆಹಿಮ 89 ನ್ನು ದಿನಾಂಕ 12-7-1989 ರಂದು ಹೊರಪಡಿಸಿದೆ.